# ಪಾಪೋಸು ಹೋದುವಲ್ಲ ಸ್ವಾಮಿ ಎನ್ನ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 74.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 185.
3. **Ref.:** Dasara Padagalu – Purandara Dasara Keerthane, Vol 4, Edited by Shri Pavanje Gururao, Sriman Madhwa Siddantha Granthalaya, Udupi, page No. 374.
4. **Note:** The wordings in book in Ref. 2 and Ref. 3 are matching (given without any highlights). The lyrics as per book in Ref.1 are marked in green highlights

| | |
|---|---|
| ರಾಗ ಮಧ್ಯಮಾವತಿ ತಾಳ: ಅಟ | ರಾಗ ಕಲ್ಯಾಣಿ ತಾಳ: ಅಟ |
| | |
| ಪಾಪೋಸು ಹೋದುವಲ್ಲ ಸ್ವಾಮಿ ಎನ್ನ | ಪಾಪೋಸು ಹೋದುವಲ್ಲ ಸ್ವಾಮಿ ಎನ್ನ |
| ಪಾಪೋಸು ಹೋದುವಲ್ಲ ‖ ಪ ‖ | ಪಾಪೋಸು ಹೋದುವಲ್ಲ |
| ಅಪಾರ ದಿನಗಳಿಂದ ಆರ್ಜನೆ ಮಾಡಿದ ‖ ಅಪ ‖ | ಅಪಾರ ಜನುಮದಿ ಆರ್ಜನೆ ಮಾಡೆ |
| | |
| ಉರಗಾದ್ರಿಯಲಿ ಸ್ವಾಮಿ ಪುಷ್ಕರಣಿ ಮೊದಲಾದ | ಉರಗಾದ್ರಿಯಲಿ ಸ್ವಾಮಿ ಪುಷ್ಕರಣಿ ಮೊದಲಾದ |
| ಪರಿಪರಿ ತೀರ್ಥ ಸ್ನಾನಗಳ ಮಾಡಿ | ಪರಿಪರಿ ತೀರ್ಥ ಸ್ನಾನಗಳ ಮಾಡೆ |
| ಹರಿದಾಸರ ಕೂಡಿ ಗಿರಿರಾಯನ ಮೂರ್ತಿ | ಹರಿದಾಸರ ಕೂಡಿ ಶ್ರೀನಿವಾಸನ ಸಂ- |
| ದರುಶನದಲ್ಲಿ ಮೈ ಮರೆತಿರಲು ಎನ್ನ ‖ 1 ‖ | ದರುಶನದಲ್ಲಿ ಮೈ ಮರೆದಿದ್ದೆನೊ ಎನ್ನ |
| | |
| ಪರಮ ಭಾಗವತರ ಹರಿಕಥೆ ಕೇಳಲು | ಪರಮ ಭಾಗವತರ ಹರಿಕಥೆ ಪೇಳಲು |
| ಪರಮ ಭಕುತಿಯಿಂದ ಕೇಳುತಿರೆ | ಪರಮ ಭಕುತಿಯಲಿ ಕೇಳುತಿದ್ದೆ |
| ಪರಮ ಪಾಪಿಗಳ ಪಾಲಾಗಿ ಪೋದುವು | ಪರಮ ಪಾಪಿಷ್ಠರ ಪಾಲಿಗೆ ಪೋದುವು |
| ಪರಮ ಪುರುಷನ ಮನಸಿಗೆ ಬಂದೀಗ ‖ 2 ‖ | ಪರಮಾತ್ಮನ ಮನಸಿಗೆ ಬಂತು ಹೀಗೆ |
| | |
| ಮಾಯಾದೇವಿ ಎನಗೆ ಮೆಚ್ಚಿ ಕೊಟ್ಟಿದ್ದಳು | ಮಾಯೆ ಒಲಿದು ಎನಗೆ ತಂದು ಕೊಟ್ಟಿದ್ದಳು |
| ದಾಯಾದಿಗಳು ನೋಡಿ ಸಹಿಸಲಿಲ್ಲ | ದಾಯಾದಿಗಳು ನೋಡಿ ಸಹಿಸಲಿಲ್ಲ |
| ಮಾಯಾ ರಮಣ ನಮ್ಮ ಪುರಂದರ ವಿಠಲನ | ಮಾಯಾ ರಮಣ ನಮ್ಮ ಪುರಂದರ ವಿಠಲನ |
| ಮಾಯದಿಂದಲಿ ಮಟ್ಟಮಾಯವಾದವು ಎನ್ನ ‖ 3 ‖ | ಮಾಯದಿಂದಲಿ ಮಟ್ಟಮಾಯವಾದವು ಈಗ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಪುರಂದರ ದಾಸರು ಒಮ್ಮೆ ತಿರುಪತಿ ಯಾತ್ರೆಗೆ ಹೋಗಿದ್ದಾಗ, ಗುಡಿಯ ಹೊರಗೆ ಹರಿಕಥೆಯಾಗುತ್ತಿದ್ದಿತಂತೆ; ಅದನ್ನು ಕೇಳುತ್ತ ಕುಳಿತಿರಲು, ಹೊರಗಡೆ ಇರಿಸಿದ್ದ ಇವರ ಮೆಟ್ಟುಗಳನ್ನು ಯಾರೋ ಕದ್ದೊಯ್ದರಂತೆ. ಹೊರಗೆ ಬಂದು ನೋಡಲು ಮೆಟ್ಟುಗಳಿಲ್ಲದಿರಲು ಈ ಹಾಡು ಹೊರಬಂದಿತೆಂದು ಹೇಳುತ್ತಾರೆ. ಇಲ್ಲಿ 'ಪಾಪೋಸು' ಎಂಬ ಮಾತಿಗೆ ಕಾಲಿಗೆ ಹಾಕಿಕೊಳ್ಳುವ ಮೆಟ್ಟು ಎಂದೂ ಅರ್ಥವಿದೆ; ಪಾಪ–ಓಸು (ಓಸು, ಅನಿತು) ಪಾಪಗಳಷ್ಟೂ ಎಂಬ ಅರ್ಥವೂ ಆಗುತ್ತದೆ. ದಾಸರು ಈ ಚಮತ್ಕಾರದ ಮಾತಿನಿಂದ ಸಮಾಧಾನವನ್ನು ತಂದುಕೊಂಡಿದ್ದಾರೆ.

**ಪಾಪೋಸು** – ಪಾಪಾಸು, ಹಿಂದಿಯ 'ಪಾಯಪಾಸ' ಎಂಬ ಮಾತಿನ ರೂಪ; ಮೇಲೆ ಹೇಳಿದಂತೆ ಪಾಪ+ಓಸು, ಅಷ್ಟೂ ಪಾಪಗಳು. ಪಾದರಕ್ಷೆ, ಕಾಲ್ಮರೆ

**ಆರ್ಜನೆ** = ಗಳಿಕೆ

**ಉರಗಾದ್ರಿ** – ಶೇಷಾಚಲ, ತಿರುಮಲೆ – ತಿರುಪತಿಯ ಬೆಟ್ಟ.

**ಸ್ವಾಮಿಪುಷ್ಕರಿಣಿ** – ವೆಂಕಟೇಶ್ವರ ಗುಡಿಯ ಹತ್ತಿರ ಇರುವ ಕೊಳ; ಇದಲ್ಲದೆ ಪಾಪ ವಿನಾಶನ, ಆಕಾಶಗಂಗೆ, ತುಂಬುರುತೀರ್ಥ ಮೊದಲಾದ ಇತರ ಕೊಳಗಳೂ ಇವೆ (ಪರಿ ಪರಿ ತೀರ್ಥ).

**ಗಿರಿರಾಯನ** –ಬೆಟ್ಟದೊಡೆಯನಾದ ಶ್ರೀನಿವಾಸನ.

**ಮಾಯಾದೇವಿ** – ಜೀವನ ಸ್ವರೂಪ ಜ್ಞಾನಕ್ಕೆ ಅಡ್ಡಿಬರುವ, ತೆರೆಯಂತಿರುವ, ಅಜ್ಞಾನ; ಅದರ ಫಲವಾಗಿ ವಿಷಯಾಸಕ್ತಿ, ರಾಗದ್ವೇಷಾದಿಗಳು, ಪಾಪ ಸಂಘಟನೆ.

**ಮಾಯಾ ರಮಣ** – ಲಕ್ಷ್ಮಿಯು ನಾರಾಯಣನ ಮಾಯಾ ರೂಪಿಣಿ; ಇಲ್ಲಿ ಮಾಯೆಯೆಂದರೆ ಅಚಿಂತ್ಯಾದ್ಭುತಶಕ್ತಿ.

**Classification:** Keerthane
**Ankita:** purandara vittala
**Location:** Tirupati, India.
**Category:** Jeevana Darshana, Sankeerna

**Sub-Category:** paposu, janma, swamytheertha, bhagavata, papa, daya, maya, chappali,
**Pravachana:** NA
**Explanation:** NA